DECCAN HERALD
Saturday
May 1, 2021

# Webinar on blood transfusion services held

**UDUPI, DHNS:** Kasturba Hospital, Manipal Blood Centre, in association with World Health Organisation (WHO), organised an international three-day webinar for health care providers engaged in blood transfusion services in Bangladesh, Indonesia, Maldives and Nepal.

WHO-SEARO (South East Asia Regional Office) regional advisor Dr Aparna Singh Shah said that the main objective of the event is to provide technical guidance and training to upgrade the quality of testing of transfusion transmissible infections. A total of 191 Blood Centre officials, technical people from SEAR countries participated in the programme.

Blood Centre director Dr Shamee Shastri said for ensuring blood safety, considerable care and precautions must be implemented at each step of the blood transfusion process starting from blood collection from the donors to transfusion to the recipients. A prominent part of these processes is the screening of transfusion transmissible infections.

"Thus, consideration should be given for the quality assurance of infection screening which is the need of the hour," he added. Resource persons from the National Reference Laboratory, Australia, which is the WHO-Collaborating Centre, also shared their knowledge.

DAIIJIWORLD

30th APRIL 2021

# Kasturba Hospital, Manipal Blood Center organise international webinar in association with WHO

Udupi, Apr 30: Kasturba Hospital, Manipal Blood Center organized international webinar series for three days in association with World Health Organization. This three-day webinar (April 27-29) series aimed to impart quality information to the health care providers engaged in blood transfusion services in the countries of Bangladesh, Indonesia, Maldives, Nepal.

Regional advisor of WHO-SEARO, Dr Aparna Singh Shah, addressing the audience during the opening session said, "The main objective of this event is to provide technical guidance and training to upgrade the quality of testing of transfusion transmissible infections."

Dr Sharath Rao, dean of Kasturba Medical College, Manipal said, "Though the world around us stands still during this pandemic I am happy that as healthcare professionals, instead of taking a step back we are trying our level best to update ourselves to be at par with the latest information, technology, and resources."




Dr Shamee Shastry, director of the blood centre had taken this initiative to collaborate with the Asian Association of Transfusion Medicine to hold the online pilot training program of the World Health Organization. A total of 191 blood centre officials, technical people from SEAR countries have actively participated in the program. Speaking on the occasion she said, "For ensuring blood safety, considerable care and precautions must be implemented at each step of the blood transfusion process starting from blood collection from the donors to transfusion to the recipients. A prominent part of these processes is

the screening of transfusion transmissible infections. Hence profound consideration shall be given for the quality assurance of infection screening which is the need of the hour."

This training series offered interesting and informative lecture sessions, panel discussions, and demonstration videos and 38 speakers from across the world contributed to the program. Resource persons from National Reference Laboratory, Australia which is the WHO-Collaborating Center have shared their knowledge and expertise.

Mutana, COO and Dr Avinash Shetty, medical superintendent of Kasturba Hospital appreciated the efforts made by the team of Kasturba Hospital Blood Center in organizing such an international webinar series

ವಿಜಯವಾಣಿ

ಶನಿವಾರ 1 ಮೇ 2021 ● 1 MAY 2021
● VIJAYAVANI » MANGALURU

## ಮಣಿಪಾಲ ಕೆಎಂಸಿ ರಕ್ತ ನಿಧಿ ಕೇಂದ್ರದ ನಿರ್ದೇಶಕಿ ಡಾ.ಶಮೀ ಶಾಸ್ತ್ರಿ ಹೇಳಿಕೆ

# ರಕ್ತ ಸುರಕ್ಷತೆ ಖಾತ್ರಿಪಡಿಸುವಿಕೆ ಅತಿ ಅಗತ್ಯ

■ ವಿಜಯವಾಣಿ ಸುದ್ದಿಜಾಲ ಉಡುಪಿ

ರಕ್ತ ಸುರಕ್ಷತೆಯನ್ನು ಖಾತ್ರಿಪಡಿಸಿಕೊಳ್ಳಲು, ದಾನಿಗಳಿಂದ ರಕ್ತ ಸಂಗ್ರಹದಿಂದ ವರ್ಗಾವಣೆಯಾಗುವವರೆಗೆ ಈ ಪ್ರಕ್ರಿಯೆಯ ಪ್ರತಿಯೊಂದು ಹಂತದಲ್ಲೂ ಸಾಕಷ್ಟು ಕಾಳಜಿ ಮತ್ತು ಮುನ್ನೆಚ್ಚರಿಕೆ ಜಾರಿಗೆ ತರಬೇಕು. ವರ್ಗಾವಣೆ ಸಂದರ್ಭದಲ್ಲಿ ಹರಡುವ ಸೋಂಕುಗಳ ತಪಾಸಣೆ ನಡೆಸಬೇಕು. ರಕ್ತದ ಗುಣಮಟ್ಟದ ಭರವಸೆ ನೀಡುವುದು ಕೋವಿಡ್ ಸಂದರ್ಭದಲ್ಲಿ ಅವಶ್ಯಕ ಎಂದು ಮಣಿಪಾಲ ಕೆಎಂಸಿ ರಕ್ತ ನಿಧಿ ಕೇಂದ್ರದ ನಿರ್ದೇಶಕಿ ಡಾ.ಶಮೀ ಶಾಸ್ತ್ರಿ ಹೇಳಿದರು.

ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ರಕ್ತನಿಧಿ ಕೇಂದ್ರ ಹಾಗೂ ವಿಶ್ವ ಆರೋಗ್ಯ ಸಂಸ್ಥೆಯ ಸಹಯೋಗದೊಂದಿಗೆ ಮೂರು ದಿನಗಳ ಕಾಲ ನಡೆದ ಅಂತಾರಾಷ್ಟ್ರೀಯ ವೆಬಿನಾರ್ ಕಾರ್ಯಕ್ರಮದಲ್ಲಿ ಮಾತನಾಡಿದರು.

> ಇಡೀ ಪ್ರಪಂಚ ಇನ್ನೂ ಸಾಂಕ್ರಾಮಿಕ ಲೋಕದಲ್ಲಿ ನಿಂತಿದ್ದರೂ ನಾವು ಆರೋಗ್ಯ ವೃತ್ತಿಪರರಾಗಿ ಹೊಸ ಮಾಹಿತಿ, ತಂತ್ರಜ್ಞಾನ ಮತ್ತು ಸಂಪನ್ಮೂಲಗಳೊಂದಿಗೆ ಜ್ಞಾನದ ಮಟ್ಟವನ್ನು ವೃದ್ಧಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಸಂತಸ ತಂದಿದೆ.
>
> । ಡಾ.ಶರತ್ ಕೆ. ರಾವ್ ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನ ಡೀನ್

ವೆಬಿನಾರ್‌ಗೆ ಚಾಲನೆ ನೀಡಿದ ಡಬ್ಲ್ಯೂ ಎಚ್‌ಒ-ಸೇರೋ ಪ್ರಾದೇಶಿಕ ಸಲಹೆಗಾರ್ತಿ ಡಾ.ಅಪರ್ಣ ಸಿಂಗ್ ಷಾ, ರಕ್ತ ವರ್ಗಾವಣೆಯ ಸಂದರ್ಭದಲ್ಲಿ ಹರಡುವ ಸೋಂಕುಗಳ ಪರೀಕ್ಷೆಯ ಗುಣಮಟ್ಟವನ್ನು ಹೆಚ್ಚಿಸಲು ತಾಂತ್ರಿಕ ಮಾರ್ಗದರ್ಶನ ಮತ್ತು ತರಬೇತಿ ನೀಡುವುದು ಕಾರ್ಯಕ್ರಮದ ಮುಖ್ಯಉದ್ದೇಶ ಎಂದು ಹೇಳಿದರು.

ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನ ಡೀನ್ ಡಾ.ಶರತ್ ಕೆ.ರಾವ್ ಮಾತನಾಡಿದರು.

ಕಸ್ತೂರ್ಬಾ ಆಸ್ಪತ್ರೆ ರಕ್ತ ಕೇಂದ್ರದ ತಂಡದ ಕಾರ್ಯವನ್ನು ಮುಖ್ಯ ನಿರ್ವಹಣಾಧಿಕಾರಿ ಸಿ.ಜಿ. ಮುತ್ತನ ಮತ್ತು ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ ಶ್ಲಾಘಿಸಿದರು.

ಏಷ್ಯನ್ ಅಸೋಸಿಯೇಷನ್ ಆಫ್ ಟ್ರಾನ್ಸ್‌ಫ್ಯೂಷನ್ ಮೆಡಿಸಿನ್‌ನ ಸಹಯೋಗದೊಂದಿಗೆ ವಿಶ್ವ ಆರೋಗ್ಯ ಸಂಸ್ಥೆಯ ಆನ್‌ಲೈನ್ ಪೈಲಟ್ ತರಬೇತಿ ಕಾರ್ಯಕ್ರಮ ನಡೆಯಿತು. ಒಟ್ಟು 191ರಕ್ತ ಕೇಂದ್ರದ ಅಧಿಕಾರಿಗಳು, ತಾಂತ್ರಿಕ ಜನರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಬಾಂಗ್ಲಾದೇಶ, ಇಂಡೋನೇಷ್ಯಾ, ಮಾಲ್ಡೀವ್ಸ್ ನೇಪಾಳ ದೇಶಗಳಲ್ಲಿ ರಕ್ತ ವರ್ಗಾವಣೆ ಸೇವೆಗಳಲ್ಲಿ ತೊಡಗಿರುವವರೊಂದಿಗೆ ಮಾಹಿತಿ ವಿನಿಮಯ ನಡೆಯಿತು. ವಿಶ್ವದಾದ್ಯಂತದ 38 ಸಂಪನ್ಮೂಲ ವ್ಯಕ್ತಿಗಳು ಉಪನ್ಯಾಸ ನೀಡಿದರು.

ವಿಜಯ ಕರ್ನಾಟಕ

ಶನಿವಾರ, 1 ಮೇ 2021

# ಮಣಿಪಾಲ ಕೆಎಂಸಿ ಆಸ್ಪತ್ರೆಯಲ್ಲಿ ಅಂತಾರಾಷ್ಟ್ರೀಯ ಸರಣಿ ವೆಬಿನಾರ್

**ವಿಕ ಸುದ್ದಿಲೋಕ** ಉಡುಪಿ

ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯ ರಕ್ತ ಕೇಂದ್ರದ ವತಿಯಿಂದ ವಿಶ್ವ ಆರೋಗ್ಯ ಸಂಸ್ಥೆಯ ಸಹಯೋಗದೊಂದಿಗೆ ಮೂರು ದಿನಗಳ ಕಾಲ ಅಂತಾರಾಷ್ಟ್ರೀಯ ಸರಣಿ ವೆಬಿನಾರ್ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಏ.27ರಿಂದ 29ರವರಗೆ ನಡೆದ ಸರಣಿ ವೆಬಿನಾರ್ ಕಾರ್ಯಕ್ರಮ ಬಾಂಗ್ಲಾದೇಶ, ಇಂಡೋನೇಷ್ಯಾ, ಮಾಲ್ದೀವ್ಸ್ ನೇಪಾಳ ದೇಶಗಳಲ್ಲಿ ರಕ್ತ ವರ್ಗಾವಣೆ ಸೇವೆಗಳಲ್ಲಿ ತೊಡಗಿರುವ ಆರೋಗ್ಯ ರಕ್ಷಣೆ ನೀಡುಗರಿಗೆ ಗುಣಮಟ್ಟದ ಮಾಹಿತಿಯನ್ನು ನೀಡುವ ಗುರಿ ಹೊಂದಿತ್ತು.

ಡಬ್ಲ್ಯೂಎಚ್‌ಒ-ಸೇರೋನ ಪ್ರಾದೇಶಿಕ ಸಲಹೆಗಾರ ಡಾ. ಅಪರ್ಣ ಸಿಂಗ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮಣಿಪಾಲ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನ ಡೀನ್ ಡಾ. ಶರತ್ ಕೆ. ರಾವ್ ಮಾತನಾಡಿ, ತಾವೆಲ್ಲ ಆರೋಗ್ಯ ವೃತ್ತಿಪರರಾಗಿ ಒಂದು ಹೆಜ್ಜೆ ಹಿಂದಕ್ಕೆ ಸರಿಯುವ ಬದಲು ಹೊಸ ಹೊಸ ಮಾಹಿತಿ, ತಂತ್ರಜ್ಞಾನ ಮತ್ತು ಸಂಪನ್ಮೂಲಗಳೊಂದಿಗೆ ನಮ್ಮ ಜ್ಞಾನದ ಮಟ್ಟವನ್ನು ವೃದ್ಧಿಸಿಕೊಳ್ಳಲು ಅತ್ಯುತ್ತಮವಾಗಿ ಪ್ರಯತ್ನಿಸುತ್ತಿರುವುದು ನನಗೆ ಸಂತೋಷವಾಗಿದೆ ಎಂದರು.

ರಕ್ತ ಕೇಂದ್ರದ ನಿರ್ದೇಶಕಿ ಡಾ. ಶಮೀ ಶಾಸ್ತ್ರಿ ಮಾತನಾಡಿದರು. ಅಂತಾರಾಷ್ಟ್ರೀಯ ವೆಬಿನಾರ್ ಸರಣಿಯನ್ನು ಯಶಸ್ವಿಯಾಗಿ ಆಯೋಜಿಸಿದ ಕಸ್ತೂರ್ಬಾ ಆಸ್ಪತ್ರೆ ರಕ್ತ ಕೇಂದ್ರದ ತಂಡವನ್ನು ಮುಖ್ಯ ನಿರ್ವಹಣಾಧಿಕಾರಿ ಸಿ.ಜಿ. ಮುತ್ತನ ಮತ್ತು ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ್ ಶೆಟ್ಟಿ ಶ್ಲಾಘಿಸಿದರು.

ಪ್ರಜಾವಾಣಿ ಶನಿವಾರ • ಮೇ 1, 2021

ಉಡುಪಿ: ಅಂತರರಾಷ್ಟ್ರೀಯ ಸರಣಿ ವೆಬಿನಾರ್ ಕಾರ್ಯಕ್ರಮ

# ‘ರಕ್ತ ವರ್ಗಾವಣೆ: ಎಚ್ಚರಿಕೆ ಅಗತ್ಯ’

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ರಕ್ತ ವರ್ಗಾವಣೆ ಮಾಡುವವರಿಗೆ ಮಾಹಿತಿ ನೀಡಲಾಯಿತು
- ರಕ್ತ ವರ್ಗಾವಣೆ ವೇಳೆ ಹರಡುವ ರೋಗಗಳ ಬಗ್ಗೆ ಎಚ್ಚರ ಅಗತ್ಯ
- ಸಕಾರಾತ್ಮಕ ಬೆಳವಣಿಗೆಗೆ ವಿಶೇಷ ಒತ್ತು

ಉಡುಪಿ: ಮಣಿಪಾಲದ ಕಸ್ತೂರಬಾ ಆಸ್ಪತ್ರೆ, ರಕ್ತ ಕೇಂದ್ರ ಹಾಗೂ ವಿಶ್ವ ಆರೋಗ್ಯ ಸಂಸ್ಥೆಯ ಸಹಯೋಗದೊಂದಿಗೆ ಈಚೆಗೆ ಅಂತರ ರಾಷ್ಟ್ರೀಯ ವೆಬಿನಾರ್ ಕಾರ್ಯಕ್ರಮ ನಡೆಯಿತು.

ಮೂರು ದಿನಗಳ ವೆಬಿನಾರ್‌ನಲ್ಲಿ ಬಾಂಗ್ಲಾದೇಶ, ಇಂಡೋನೇಷ್ಯಾ, ಮಾಲ್ಡೀವ್ಸ್, ನೇಪಾಳ ಸೇರಿದಂತೆ ಹಲವು ದೇಶಗಳಲ್ಲಿ ರಕ್ತ ವರ್ಗಾವಣೆ ಪ್ರಕ್ರಿಯೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗೆ ತರಬೇತಿ ಹಾಗೂ ಮಾಹಿತಿ ನೀಡಲಾಯಿತು.

ವೆಬಿನಾರ್‌ಗೆ ಚಾಲನೆ ನೀಡಿದ ಡಬ್ಲ್ಯೂಎಚ್‌ಒ ಸೆರೋ ಪ್ರಾದೇಶಿಕ ಸಲಹೆಗಾರ್ತಿ ಡಾ.ಅಪರ್ಣ ಸಿಂಗ್ ಷಾ, ‘ರಕ್ತ ವರ್ಗಾವಣೆ ಸಂದರ್ಭ ಹರಡಬಹುದಾದ ಸೋಂಕುಗಳ ಪರೀಕ್ಷೆಯಲ್ಲಿ ಗುಣಮಟ್ಟವನ್ನು ಹೆಚ್ಚಿಸಲು ತಾಂತ್ರಿಕ ಮಾರ್ಗದರ್ಶನ ಮತ್ತು ತರಬೇತಿ ನೀಡುವುದು ಕಾರ್ಯಕ್ರಮದ ಮುಖ್ಯ ಉದ್ದೇಶ’ ಎಂದರು.

ಕಸ್ತೂರಬಾ ವೈದ್ಯಕೀಯ ಕಾಲೇಜಿನ ಡೀನ್ ಡಾ.ಶರತ್ ಕೆ ರಾವ್ ಮಾತನಾಡಿ, ಪ್ರಪಂಚ ಸಾಂಕ್ರಾಮಿಕ ಸೋಂಕಿನಲ್ಲಿ ಸಿಲುಕಿರುವ ಸಂದರ್ಭದಲ್ಲಿ ಭೀತಿಗೊಳಗಾಗದೆ ಆರೋಗ್ಯ ವೃತ್ತಿಪರರಾಗಿ ದುಡಿಯುತ್ತಿರುವ ಸಿಬ್ಬಂದಿಯ ಸೇವೆ ಅಭಿನಂದನೀಯ. ಹೊಸ ಮಾಹಿತಿ, ತಂತ್ರಜ್ಞಾನ ಮತ್ತು ಸಂಪನ್ಮೂಲಗಳೊಂದಿಗೆ ಜ್ಞಾನದ ಮಟ್ಟವನ್ನು ವೃದ್ಧಿಸಿಕೊಳ್ಳುತ್ತಿರುವುದು ಸಕಾರಾತ್ಮಕ ಬೆಳವಣಿಗೆ ಎಂದರು.

ವಿಶ್ವ ಆರೋಗ್ಯ ಸಂಸ್ಥೆಯ ಆನ್‌ಲೈನ್ ಪೈಲಟ್ ತರಬೇತಿ ಕಾರ್ಯಕ್ರಮವನ್ನು ಏಷ್ಯನ್ ಅಸೋಸಿಯೇಷನ್ ಆಫ್ ಟ್ರಾನ್ಸ್‌ಫ್ಯೂಷನ್ ಮೆಡಿಸಿನ್ ಸಹಯೋಗದೊಂದಿಗೆ ಕೆಎಂಸಿಯ ರಕ್ತ ಕೇಂದ್ರದ ನಿರ್ದೇಶಕಿ ಡಾ.ಶಮಿ ಶಾಸ್ತ್ರಿ ಅವರ ಮುಂದಾಳತ್ವದಲ್ಲಿ ನಡೆಯಿತು. 191 ರಕ್ತ ಕೇಂದ್ರದ ಅಧಿಕಾರಿಗಳು, ತಂತ್ರಜ್ಞರು ಭಾಗವಹಿಸಿದ್ದರು.

ವೆಬಿನಾರ್‌ನಲ್ಲಿ ಮಾತನಾಡಿದ ಶಮಿ ಶಾಸ್ತ್ರಿ ‘ದಾನಿಗಳಿಂದ ರಕ್ತ ಸಂಗ್ರಹ ಪ್ರಕ್ರಿಯೆಯಿಂದ ಹಿಡಿದು ರಕ್ತ ವರ್ಗಾವಣೆಯಾಗುವವರೆಗಿನ ಪ್ರತಿ ಹಂತಗಳಲ್ಲೂ ಕಾಳಜಿ ಹಾಗೂ ಅಗತ್ಯ ಮುನ್ನೆಚ್ಚರಿಕೆ ವಹಿಸುವುದು ಬಹಳ ಮುಖ್ಯ. ರಕ್ತ ವರ್ಗಾವಣೆ ಸಂದರ್ಭದಲ್ಲಿ ಹರಡಬಹುದಾದ ಸೋಂಕುಗಳ ತಪಾಸಣೆ ಮಾಡುವುದು ಬಹಳ ಮುಖ್ಯವಾದ ಭಾಗ’ ಎಂದರು

ವೆಬಿನಾರ್‌ನಲ್ಲಿ 38 ಸಂಪನ್ಮೂಲ ವ್ಯಕ್ತಿಗಳು ಉಪನ್ಯಾಸ ನೀಡಿದರು. ವಿಶ್ವ ಆರೋಗ್ಯ ಸಂಸ್ಥೆ ಸಹಯೋಗ ಕೇಂದ್ರವಾಗಿರುವ ಆಸ್ಟ್ರೇಲಿಯಾದ ರಾಷ್ಟ್ರೀಯ ಉಲ್ಲೇಖ ಪ್ರಯೋಗಾಲಯದ ಸಂಪನ್ಮೂಲ ವ್ಯಕ್ತಿಗಳು ಅಭಿಪ್ರಾಯ ಹಂಚಿಕೊಂಡರು.



ಮಣಿಪಾಲದ ಕಸ್ತೂರಬಾ ಆಸ್ಪತ್ರೆ, ರಕ್ತ ಕೇಂದ್ರ ಹಾಗೂ ವಿಶ್ವ ಆರೋಗ್ಯ ಸಂಸ್ಥೆಯ ಸಹಯೋಗದೊಂದಿಗೆ ಈಚೆಗೆ ಅಂತರರಾಷ್ಟ್ರೀಯ ವೆಬಿನಾರ್ ಕಾರ್ಯಕ್ರಮ ನಡೆಯಿತು.

KARAVALI XPRESS

30th APRIL 2021

# ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ರಕ್ತ ಕೇಂದ್ರ ಹಾಗೂ ವಿಶ್ವ ಆರೋಗ್ಯ ಸಂಸ್ಥೆಯಿಂದ ಅಂತರರಾಷ್ಟ್ರೀಯ ಸರಣಿ ವೆಬಿನಾರ್

*By Janardhan Kodavoor/Team karavalixpress, April 30, 2021*

64




ಮಣಿಪಾಲ: ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲದ ರಕ್ತ ಕೇಂದ್ರವು ವಿಶ್ವ ಆರೋಗ್ಯ ಸಂಸ್ಥೆಯ ಸಹಯೋಗದೊಂದಿಗೆ ಮೂರು ದಿನಗಳ ಕಾಲ ಅಂತರರಾಷ್ಟ್ರೀಯ ವೆಬಿನಾರ್ ಕಾರ್ಯಕ್ರಮ ಆಯೋಜಿಸಿತ್ತು.

ಏಪ್ರಿಲ್ 27 ರಿಂದ 29 ರವರೆಗೆ ನಡೆದ ಈ ಸರಣಿ ವೆಬಿನಾರ್ ಕಾರ್ಯಕ್ರಮವು ಬಾಂಗ್ಲಾದೇಶ, ಇಂಡೋನೇಷ್ಯಾ, ಮಾಲ್ಡೀವ್ಸ್, ನೇಪಾಳ ದೇಶಗಳಲ್ಲಿ ರಕ್ತ ವರ್ಗಾವಣೆ ಸೇವೆಗಳಲ್ಲಿ ತೊಡಗಿರುವ ಆರೋಗ್ಯ ರಕ್ಷಣೆ ನೀಡುಗರಿಗೆ ಗುಣಮಟ್ಟದ ಮಾಹಿತಿಯನ್ನು ನೀಡುವ ಗುರಿಯನ್ನು ಹೊಂದಿತ್ತು.

ಆರಂಭಿಕ ನುಡಿಗಳೊಂದಿಗೆ ವೆಬಿನಾರ್ ಗೆ ಚಾಲನೆ ನೀಡಿದ ಡಬ್ಲ್ಯೂ ಎಚ್ ಓ - ಸೇರೋ (WHO-SEARO) ನ ಪ್ರಾದೇಶಿಕ ಸಲಹೆಗಾರರಾದ ಡಾ.ಅಪರ್ಣ ಸಿಂಗ್ ಷಾ, "ರಕ್ತ ವರ್ಗಾವಣೆಯ ಸಂದರ್ಭದಲ್ಲಿ ಹರಡುವ ಸೋಂಕುಗಳ ಪರೀಕ್ಷೆಯ ಗುಣಮಟ್ಟವನ್ನು ಹೆಚ್ಚಿಸಲು ತಾಂತ್ರಿಕ ಮಾರ್ಗದರ್ಶನ ಮತ್ತು ತರಬೇತಿಯನ್ನು ನೀಡುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ" ಎಂದು ಹೇಳಿದರು.

ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನ ಡೀನ್ ಡಾ.ಶರತ್ ಕೆ ರಾವ್ ಮಾತನಾಡಿ, "ಇಡೀ ಪ್ರಪಂಚವು ಇನ್ನೂ ಸಾಂಕ್ರಾಮಿಕ ಲೋಕದಲ್ಲಿ ನಿಂತಿದ್ದರೂ, ತಾವೆಲ್ಲ ಆರೋಗ್ಯ ವೃತ್ತಿಪರರಾಗಿ, ಒಂದು ಹೆಜ್ಜೆ ಹಿಂದಕ್ಕೆ ಸರಿಯುವ ಬದಲು ಹೊಸ ಹೊಸ ಮಾಹಿತಿ, ತಂತ್ರಜ್ಞಾನ ಮತ್ತು ಸಂಪನ್ಮೂಲಗಳೊಂದಿಗೆ ನಮ್ಮ ಜ್ಞಾನದ ಮಟ್ಟವನ್ನು ವೃದ್ಧಿಸಿಕೊಳ್ಳಲು ಅತ್ಯುತ್ತಮವಾಗಿ ಪ್ರಯತ್ನಿಸುತ್ತಿರುವುದು ನನಗೆ ಸಂತೋಷವಾಗಿದೆ" ಎಂದರು.

ರಕ್ತ ಕೇಂದ್ರದ ನಿರ್ದೇಶಕಿ ಡಾ.ಶಮೀ ಶಾಸ್ತ್ರಿ ಅವರು ವಿಶ್ವ ಆರೋಗ್ಯ ಸಂಸ್ಥೆಯ ಆನ್ ಲೈನ್ ಪೈಲಟ್ ತರಬೇತಿ ಕಾರ್ಯಕ್ರಮವನ್ನು ಏಷ್ಯನ್ ಅಸೋಸಿಯೇಷನ್ ಆಫ್ ಟ್ರಾನ್ಸ್ಫ್ಯೂಷನ್ ಮೆಡಿಸಿನ್ ನ ಸಹಯೋಗದೊಂದಿಗೆ ನಡೆಸಲು ಮುಂದಾಳತ್ವ ವಹಿಸಿದ್ದರು.ಈ ಪ್ರಕ್ರಿಯೆಗಳ ಪ್ರಮುಖ ಭಾಗವೆಂದರೆ ವರ್ಗಾವಣೆ ಸಂದರ್ಭದಲ್ಲಿ ಹರಡುವ ಸೋಂಕುಗಳ ತಪಾಸಣೆ. ಸೋಂಕಿನ ತಪಾಸಣೆಯ ಗುಣಮಟ್ಟದ ಭರವಸೆಗಾಗಿ ಆಳವಾದ ಪರಿಗಣನೆಯನ್ನು ನೀಡುವುದು ಈ ಸಮಯದ ಅವಶ್ಯಕತೆಯಾಗಿದೆ" ಎಂದರು.